# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1201** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ರವಿಕುಮಾರ್ ಎನ್ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **19.12.2024** |
| **ಉತ್ತರಿಸುವ ಸಚಿವರು** | : | ಗೃಹ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ADGP ಕೆಎಸ್‌ಆರ್‌ಪಿ, ADGP ನೇಮಕಾತಿ, ಮತ್ತು ADGP ಆಡಳಿತ ಹಾಗೂ ACS ಗೃಹ ಇಲಾಖೆಯವರನ್ನೊಳಗೊಂಡಂತೆ ದಿನಾಂಕ:22.03.2022ರಂದು ನಡೆದ ಸಭಾ ನಡವಳಿ ಸಂಖ್ಯೆ:ಒಇ 42 ಪಿಪಿಎಸ್ 2019 ದಿನಾಂಕ:31.05.2022ರಲ್ಲಿ ಸ್ಪಷ್ಟವಾಗಿ ಕರೆ ಪತ್ರ ಕಳುಹಿಸಲಾದ 488 ಅಭ್ಯರ್ಥಿಗಳಲ್ಲಿ 111 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ್ದು, ಬಾಕಿ ಉಳಿಕೆ ಅಭ್ಯರ್ಥಿಗಳಿಗೆ ಅದೇ ಕ್ರಮವನ್ನು ಮುಂದುವರೆಸಿ ಒಂದು ಬಾರಿಯ ಕ್ರಮವಾಗಿ ಮಾನವೀಯ ನೆಲೆಯಲ್ಲಿ ನೇಮಕಾತಿ ಆದೇಶವನ್ನು ನೀಡಲು ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯವನ್ನು ಕೈಗೊಳ್ಳುವುದಾಗಿ ದಿನಾಂಕ:23.02.2024ರಂದು ಸದನದಲ್ಲಿ ಗೃಹ ಸಚಿವರು ಭರವಸೆ ನೀಡಿದ್ದು, ಪ್ರಸ್ತುತ ಈ ಭರವಸೆಯನ್ನು ಪೂರ್ಣಗೊಳಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ; | 2012ನೇ ಸಾಲಿನ ಐಆರ್‌ಬಿ ಘಟಕಗಳ 750 ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟಂತೆ ಲಭ್ಯವಿರುವ ಮಾಹಿತಿ/ದಾಖಲೆಗಳ ವಿವರ ಕೆಳಕಂಡಂತಿರುತ್ತದೆ.<br><br>➢ ಸರ್ಕಾರದ ಅಧಿಸೂಚನೆ ಸಂಖ್ಯೆ:10/ನೇಮಕಾತಿ-4/ ಡಿಐಜಿಪಿ/2011-12 ದಿನಾಂಕ:09.01.2012ರಲ್ಲಿ ಐಆರ್‌ಬಿ ಘಟಕಗಳ 750-ಸ್ಪೆ.ಆರ್‌ಪಿಸಿ ಹುದ್ದೆಗಳ ನೇಮಕಾತಿಗೆ ಅಧಿಸೂಚಿಸಲಾಗಿತ್ತು.<br><br>➢ ಪ್ರಥಮ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಿಂದ 750 ಅಭ್ಯರ್ಥಿಗಳು, ಮೊದಲ ಹೆಚ್ಚುವರಿ ಪಟ್ಟಿಯಿಂದ 354 ಅಭ್ಯರ್ಥಿಗಳು ಮತ್ತು ಎರಡನೇ ಹೆಚ್ಚುವರಿ ಪಟ್ಟಿಯಿಂದ 134 ಅಭ್ಯರ್ಥಿಗಳು ಸೇರಿದಂತೆ ಒಟ್ಟು 1238 ಅಭ್ಯರ್ಥಿಗಳನ್ನು ದಾಖಲೆ ಪರಿಶೀಲನೆಗೆ ಕರೆಯಲಾಗಿದೆ.<br><br>➢ ಕೆಎಸ್‌ಆರ್‌ಪಿ ಕೇಂದ್ರ ಕಛೇರಿಯ ಪತ್ರ ಸಂಖ್ಯೆ:11/ಸಿಬ್ಬಂದಿ-2/2011-12 ದಿನಾಂಕ:27.02.2013ರಲ್ಲಿ ಹೊರಡಿಸಲಾದ 750 ಅಭ್ಯರ್ಥಿಗಳ ಪ್ರಥಮ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಿಂದ 611 ಅಭ್ಯರ್ಥಿಗಳನ್ನು. ಮೊದಲ ಹೆಚ್ಚುವರಿ ಪಟ್ಟಿ 354 ರಲ್ಲಿ 138 ಅಭ್ಯರ್ಥಿಗಳು ಮತ್ತು ಎರಡನೇ ಹೆಚ್ಚುವರಿ ಪಟ್ಟಿ 134ರಲ್ಲಿ 1 ಅಭ್ಯರ್ಥಿಯು ಸೇರಿದಂತೆ ಒಟ್ಟು 750 ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಸಂಖ್ಯೆ:11/ಸಿಬ್ಬಂದಿ-2/2011-12 ದಿನಾಂಕ:03.01.2014 ರಲ್ಲಿ ಹೊರಡಿಸಲಾಗಿದೆ.<br><br>➢ 750 ಅಭ್ಯರ್ಥಿಗಳ ಪ್ರಥಮ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಿಂದ 139 ಅಭ್ಯರ್ಥಿಗಳನ್ನು, ಮೊದಲ ಹೆಚ್ಚುವರಿ ಪಟ್ಟಿಯ 354 ಅಭ್ಯರ್ಥಿಗಳಲ್ಲಿ 216 ಅಭ್ಯರ್ಥಿಗಳನ್ನು ಮತ್ತು ಎರಡನೇ ಹೆಚ್ಚುವರಿ ಪಟ್ಟಿಯ 134 ಅಭ್ಯರ್ಥಿಗಳಲ್ಲಿ 133 ಅಭ್ಯರ್ಥಿಗಳು ಸೇರಿದಂತೆ ಒಟ್ಟು 488 ಅಭ್ಯರ್ಥಿಗಳನ್ನು ಮುಖ್ಯವಾಗಿ ಸ್ವಂತ ಕೋರಿಕೆ, ವೈದ್ಯಕೀಯ ಪರೀಕ್ಷೆಯ ಅನರ್ಹತೆ, ಗೈರು ಹಾಜರಿ , ಜಾತಿ ಪ್ರಮಾಣ ಪತ್ರ ಅಮಾನ್ಯವಾದ, ಮೆರಿಟ್ ಆಧಾರದ ಮೇಲೆ ಮತ್ತು ಇನ್ನಿತರ ಕಾರಣಗಳಿಂದ ಅಂತಿಮ ಆಯ್ಕೆ ಪಟ್ಟಿಯಿಂದ ಕೈಬಿಡಲಾಗಿದೆ. |

| | | |
|---|---|---|
| | | ➢ ಐಆರ್‌ಬಿ 750 ಸ್ಪೆ.ಆರ್‌ಪಿಸಿ ಹುದ್ದೆಗಳಲ್ಲಿ ನೇಮಕಾತಿ ಆದೇಶ ಹೊರಡಿಸಿ ಬಾಕಿ ಉಳಿದ ರಿಕ್ತ ಹುದ್ದೆಗಳನ್ನು ತದನಂತರದಲ್ಲಿ ಕೈಗೊಳ್ಳಲಾದ ನೇಮಕಾತಿಗಳಲ್ಲಿ ಭರ್ತಿ ಮಾಡಲಾಗಿರುತ್ತದೆ.<br><br>➢ ದಿನಾಂಕ:22.03.2022 ರಂದು ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನೇಮಕಾತಿ ಪ್ರಕ್ರಿಯೆಯಲ್ಲಿ ಬಾಕಿ ಉಳಿದಿರುವ ಅಭ್ಯರ್ಥಿಗಳಿಗೆ ಅಂತಿಮ ಅವಕಾಶವನ್ನು ನೀಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಡಿಜಿ & ಐಜಿಪಿರವರಿಗೆ ಸೂಚಿಸಲಾಗಿತ್ತು. ಡಿಜಿ & ಐಜಿಪಿಯವರ ವರದಿ ಬಂದಿದ್ದು, ಉಳಿದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಸಾಧ್ಯತೆ ಕುರಿತಂತೆ ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ. |
| ಆ) | ಸದನದಲ್ಲಿ ನೀಡಿದ ಭರವಸೆಯಂತೆ IRB ಅಭ್ಯರ್ಥಿಗಳ ನೇಮಕಾತಿ ಕುರಿತು ಕಡತವು ಸಂಪುಟ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ; ಇಲ್ಲವಾದಲ್ಲಿ ಸಚಿವ ಸಂಪುಟದ ಅನುಮೋದನೆ ಪಡೆಯಲಾಗುವುದು ಯಾವಾಗ | ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ಕ್ರಮ ವಹಿಸಲಾಗುತ್ತಿದೆ. |
| ಇ) | ಬಾಕಿ ಉಳಿದ IRB ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು ಯಾವಾಗ; ಹಲವಾರು ಅಭ್ಯರ್ಥಿಗಳು ವಯೋಮಿತಿ ಮೀರುವ ಹಂತದಲ್ಲಿದ್ದು, ಮಾನವೀಯ ನೆಲೆಯಲ್ಲಿ ತುರ್ತಾಗಿ ನೇಮಕಾತಿ ಆದೇಶ ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ? | |

ಹೆಚ್‌ಡಿ 320 ಪಿಪಿಎಸ್ 2024

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು